## ೭. ಸಂಕ್ಷ ಪ್ರಾಥಮಿಕ ಭೂ ಅಭಿವೃದ್ಧಿ ಗ್ರಾಮೀಣ ಬ್ಯಾಂಕಿನಿಂದ ರೈತರಿಗೆ ಸಾಲ ದೊರಕದಿರುವುದು

† ಶ್ರೀ ಕೆ. ಕುಶಾಲ.–ಸಂಕ್ಷ ಪ್ರಾಥಮಿಕ ಭೂ ಅಭಿವೃದ್ಧಿ ಗ್ರಾಮೀಣ ಬ್ಯಾಂಕಿನಲ್ಲಿ ರೈತರು ಕಳೆದ ಒಂದು ವರ್ಷದ ಹಿಂದಿನಿಂದ, ಮನೆ ಸಾಲ, ಬಾವಿ ಸಾಲ, ಕಂರಿತು ಅರ್ಜಿಸಲ್ಲಿಸಿ, ಬಡ ರೈತದಲ್ಲಿಂದ ಜಮೀನಿಗೆ ಸಂಬಂಧಪಟ್ಟ ಮೂಲ ದಸ್ತಾವೇಜುಗಳನ್ನು ಕೂಡಾ ಲಗ್ತೀಕರಿಸಿ, ವರ್ಷ ಕಳೆದರೂ ಈ ಬಡ ರೈತರಿಗೆ ಈ ಬ್ಯಾಂಕಿನಿಂದ ಸಾಲ ವಗೈರೆ ದೊರಕಿರುವುದಿಲ್ಲ. ಅಲ್ಲದೆ ಮೂಲ ದಸ್ತಾವೇಜುಗಳನ್ನು ಹಿಂದಕ್ಕೆ ಕೊಡದೆ ಇದ್ದುದರಿಂದ ಬಡ ರೈತರು, ಇತರ ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆಯಲು ಕೂಡ ಸಾಧ್ಯವಿಲ್ಲದೆ, ತುಂಬಾ ತೊಂದರೆಗೊಳಗಾಗಿದ್ದಾರೆ. ಈ ಬ್ಯಾಂಕಿನಲ್ಲಿ ಇನ್ನಿತರ, ಹೈನುಗಾರಿಕೆ, ಕೋಳಿ ಸಾಕಾಣಿಗೆ ಸಾಲ ಕೂಡ ನೀಡುತ್ತಿಲ್ಲ. ಅಲ್ಲದೆ ಸಹಕಾರೀ ಸಂಘದಿಂದ ಈ ಭೂ ಅಭಿವೃದ್ಧಿ ಬ್ಯಾಂಕಿಗೆ. ಪರಿಶಿಷ್ಟ ಜಾತಿ ಜನಾಂಗದವರಿಗೆ ಸಾಲ ವಿತರಣೆ ಬಾಬ್ತು ಸುಮಾರು ೭೫ ಸಾವಿರಕ್ಕೂ ಮಿಕ್ಕೆ ಹಣ ಬಿಡುಗಡೆ ಮಾಡಿದ್ದರೂ ಈ ಬಾಬಿನ ಸಾಲವನ್ನು ನೀಡಲಾಗಿಲ್ಲ. ಅಲ್ಲದೆ, ಇತರ ಸಹಕಾರೀ ಸಂಘ, ಸಂಸ್ಥೆಗಳಲ್ಲಿ ಕೂಡ ಸಂಕ್ಷ ತಾಲ್ಲೂಕಿನಲ್ಲಿ ಸಾಲ ಬಡ್ಡಿ ಸಬ್ಸಿಡಿ ಮುಂತಾದ ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ. ವಿಚಾರಿಸಿದಾಗ ಸಾಲ ನೀಡಲು ಹಣದ ವ್ಯವಸ್ಥೆ ಸರಿಯಾಗಿರುವುದಿಲ್ಲ ಎಂದು ತಿಳಿದು ಬಂದಿದೆ. ಆದುದರಿಂದ ಈ ಬ್ಯಾಂಕಿನಲ್ಲಿ ವರ್ಷಗಟ್ಟಲೆ ಸಾಲ ಅಪೇಕ್ಷಿಸಿ ಅಲೆದಾಡುವ ಬಡ ರೈತರಿಗೆ ಕೂಡಲೇ ಸಾಲ ವಿತರಣೆ ಆಗುವಂತೆ, ಇಲ್ಲವೇ ಬಡ ರೈತರ ಮೂಲ ದಸ್ತಾವೇಜುಗಳನ್ನಾದರೂ ವಾಪಸ್ಸು ಕೊಡಿಸುವಂತೆ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ(ಸಹಕಾರ ಸಚಿವರು).—ಮಾನ್ಯಅಧ್ಯಕ್ಷರೇ, ಈ ಒಂದು ಸಹಕಾರಸಂಘ ಬಹಳ ಚೆನ್ನಾಗಿ ನಡೆಯುತ್ತಿದೆ. ಈ ವರ್ಷ ೪೪ ಲಕ್ಷ ರೂಪಾಯಿಗಳನ್ನು ಅಲಾಟ್ ಮಾಡಿದ್ದೇವೆ. ಈಗಾಗಲೇ ೧೦ ಲಕ್ಷ ೫೨ ಸಾವಿರ ರೂಪಾಯಿಗಳು ಸ್ಪೆಷಲ್ ಸ್ಕೀಮ್‌ನಲ್ಲಿ ಖರ್ಚಾಗಿದೆ. ೧ ಲಕ್ಷ ೯೧ ಸಾವಿರದ ೨೦೦ ರೂಪಾಯಿಗಳನ್ನು ಜನರಲ್ ಸ್ಕೀಮ್‌ನಲ್ಲಿ ಖರ್ಚು ಮಾಡಿದ್ದಾರೆ. ಜನರಲ್ ಸ್ಕೀಮ್‌ನಲ್ಲಿ ಹೆಚ್ಚು ಹಣವನ್ನು ಕೊಡುತ್ತಿಲ್ಲ. ಕಾರಣವೇನೆಂದರೆ ನಬಾರ್ಡ್‌ನವರು ೨ ಕೋಟಿ ಕೇಳಿದ್ದಕ್ಕೆ ಅಲಾಟ್ ಮಾಡಿರುವುದು ೪ ಕೋಟಿ ೮೦ ಲಕ್ಷ ಮಾತ್ರ. ಇದರಲ್ಲಿ ೧,೦೮,೫೦೦-೦೦ ರೂಪಾಯಿ ಉಳಿದಿದೆ. ಸ್ಪೆಶಲ್ ಸ್ಕೀಮ್‌ನಲ್ಲಿ ಹಣ ಉಪಯೋಗಿಕೊಳ್ಳಲು ಸೂಚನೆ ನೀಡಿದ್ದೇವೆ. ಆದರೆ ಈ ವರ್ಷ ಗೃಹ ನಿರ್ಮಾಣಕ್ಕೆ ಅವಕಾಶ ಸಿಗುವುದಿಲ್ಲ. ಈ ಸ್ಪೆಷಲ್ ಸ್ಕೀಮ್‌ನಲ್ಲಿ ೩೦ ಲಕ್ಷ ಹಣ ಇದೆ. ಅಲ್ಲಿ ಕಳೆದ ಮೂರು ವರ್ಷಗಳಿಂದ ಹಣವನ್ನು ಕೊಟ್ಟಿದ್ದೇವೆ. ಆದರಲ್ಲಿ ೫೦ ಭಾಗ ಮಾತ್ರ ಖರ್ಚು ಮಾಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಹೆಚ್ಚು ಹಣ ಕೊಡಿ ಎಂದು ಈಗಾಗಲೇ ನಾವು ಸೂಚನೆ ಕೊಟ್ಟಿದ್ದೇವೆ. ಈ ವರ್ಷ ೭೫ ಸಾವಿರ ರೂಪಾಯಿಗಳನ್ನು ಈ ಬ್ಯಾಂಕಿಗೆ ಕೊಟ್ಟಿದ್ದು ಆದರಲ್ಲಿ ೫೭ ಸಾವಿರ ರೂಪಾಯಿಗಳು ಈಗಾಗಲೇ ಸಬ್ಸಿಡಿ ಮೂಲಕ ಖರ್ಚಾಗಿದೆ. ಮಿಕ್ಕ ಹಣವನ್ನು ಕೊಡುವುದಕ್ಕೆ, ಸ್ಪೆಷಲ್ ಸ್ಕೀಮ್‌ನಲ್ಲಿ ಯಾವ ತೊಂದರೆಯೂ ಇಲ್ಲ. ಆದರೆ ಜನರಲ್ ಸ್ಕೀಮ್‌ನಲ್ಲಿ ಈ ವರ್ಷ ಹಣ ಸಿಗುವುದಿಲ್ಲ.

## ೮. ಬೀಳಗಿ ಪಟ್ಟಣಕ್ಕೆ ಕಂಡಿಯಂವ ನೀರನ್ನು ಒದಗಿಸುವುದು

† ಶ್ರೀ ಬಾಬುರೆಡ್ಡಿ ವೆಂ. ತುಂಗಳ್.— ಬೀಳಗಿಯು ತಾಲ್ಲೂಕು ಕೇಂದ್ರವಾಗಿದ್ದು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾಗುವ ಸುಮಾರು ಏಳು ಹಳ್ಳಿಗಳಿಗಾಗಿ ಬೀಳಗಿಯ ಹೊರ ವಲಯದಲ್ಲಿ ಪುನರ್ವಸತಿಯ ಕೇಂದ್ರ ನಿರ್ಮಾಣವಾಗುತ್ತಿದೆ. ಇದರಿಂದಾಗಿ ವಿಸ್ತೃತವಾಗಿ ಬದಲಾವಣೆಗಳು ಮತ್ತು ಬೆಳೆಯುತ್ತಿರುವ ಜನ ಸಂಖ್ಯೆಗೆ ನೀರು ಪೂರೈಕೆಯಲ್ಲಿ ತೊಂದರೆಯಾಗುತ್ತಿದೆ. ಈ ಮೊದಲು ಪುರಸಭೆಯಾಗಿದ್ದ ಬೀಳಗಿ ಈಗ ಮಂಡಲ ಪಂಚಾಯತಿ ಕೇಂದ್ರವಾಗಿದೆ. ಈ ಮೊದಲು ಕರ್ನಾಟಕ ನಗರ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಲಿಯವರು ಬೀಳಗಿಗೆ ನೀರು ಪೂರೈಸಲು ಒಂದು ಯೋಜನೆ ತಯಾರಿಸಿದ್ದರು. ನಂತರ ಈ ಕೆಲಸವನ್ನು ಆರೋಗ್ಯ ಶಿಲ್ಪ ಇಲಾಖೆಗೆ ಒಪ್ಪಿಸಬೇಕೆಂದು ಜಿಲ್ಲಾ ಅಭಿವೃದ್ಧಿ ಸಭೆ ತೀರ್ಮಾನಿಸಿತು. ಆದರೆ ಈ ಕಂರಿತು ತನಗೆ ಸರ್ಕಾರದಿಂದ ಯಾವುದೇ ಆದೇಶ ಬಂದಿಲ್ಲವೆಂದು ಜನಾರೋಗ್ಯ ಶಿಲ್ಪ ಇಲಾಖೆಯವರು ನನಗೆ ಕಾಗದ ಬರೆದಿದ್ದಾರೆ. ಸಧ್ಯ ಬೀಳಗಿ ಜನತೆ ಜಲ ಕ್ಷಾಮವನ್ನು ಎದುರಿಸುತ್ತಿದ್ದಾರೆ. ಬೀಳಗಿಯಲ್ಲಿ ಸಧ್ಯ ನೀರು ಪೂರೈಸುತ್ತಿರುವ ಬಾವಿಗಳಲ್ಲಿ

ನೀರು ಪ್ರಮಾಣ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಊರ ಹೊರ ವಲಯದಲ್ಲಿ ಸಮೃದ್ಧ ವಿರುವ ಒಂದು ಕೊಳವೆ ಬಾವಿ ಇದೆ. ಇದರಿಂದ ತಾತ್ಕಾಲಿಕವಾಗಿ ಬೀಳಿಗಿಗೆ ನೀರು ಪೂರೈಸಲು ಈ ಹಿಂದೆಯೇ ಅಧಿಕಾರಿಗಳು ಒಪ್ಪಿಕೊಂಡಿದ್ದರೂ ಆ ಕೆಲಸವಾಗಿಲ್ಲ. ಖಾಲಿ ಕೊಡಗಳನ್ನು ಹಿಡಿದುಕೊಂಡು ಜನರು ಬೀದಿಬೀದಿ ತಿರುಗುತ್ತಿದ್ದು ಈ ಸಮಸ್ಯೆಯ ಕುರಿತು ಯಾವ ಕ್ರಮ ಕೈಗೊಳ್ಳಲಾಗುವುದು ಎಂಬುದರ ಕುರಿತು ನಾನು ತಮ್ಮ ಮುಖಾಂತರ ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಸಂಬಂಧಪಟ್ಟ ಸಚಿವರ ಗಮನಕ್ಕೆ ಈ ವಿಷಯ ತಂದು ಕೂಡಲೇ ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇನೆ.

## ೯) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಂದನಕೆರೆಗೆ ಪೋಲೀಸ್ ಸ್ಟೇಷನ್ ಮಂಜೂರು ಮಾಡುವುದು.

† ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ).— ಮಾನ್ಯ ಅಧ್ಯಕ್ಷರೇ, ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನ ಹಂದನಕೆರೆ ಹೋಬಳಿ ಬಹಳ ದೊಡ್ಡ ಹೋಬಳಿಯಾಗಿದ್ದು, ಚಿಕ್ಕನಾಯ್ಕನಹಳ್ಳಿ ಮತ್ತು ಹುಳಿಯಾರು ಪೋಲೀಸ್ ಠಾಣೆಗಳಿಂದ ೨೫ ಕಿ. ಮೀ. ಮತ್ತು ಹುಳಿಯಾರಿನಿಂದ ೨೦ ಕಿ. ಮೀ. ದೂರದಲ್ಲಿ ಇದ್ದು, ಗ್ರಾಮಾಂತರ ಒಳ ಪ್ರದೇಶವಾಗಿರುತ್ತದೆ. ಈ ಪ್ರದೇಶದ ಜನ ಯಾವುದೇ ಪೋಲೀಸ್ ಕಂಪ್ಲೇಂಟ್ ಕೊಡಲು ಮತ್ತು ಪೋಲೀಸ್ ಇಲಾಖೆಯಿಂ ನೆರವು ಪಡೆಯಲು ಬಹಳ ದೂರದ ಚಿಕ್ಕನಾಯ್ಕನಹಳ್ಳಿ ಮತ್ತು ಹುಳಿಯಾರಿಗೆ ಹೋಗಲು ಬಹಳ ಕಷ್ಟ ಆಗುತ್ತದೆ. ಆದ್ದರಿಂದ ಹಂದನಕೆರೆಗೆ ಒಂದು ಪೋಲೀಸ್ ಸ್ಟೇಷನ್ ಕೊಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿ ಇದ್ದು. ಇದುವರೆಗೆ ಮಂಜೂರು ಮಾಡಿರುವುದಿಲ್ಲ. ಆದ್ದರಿಂದ ೧೯೮೭-೮೮ನೇ ವರ್ಷದಲ್ಲಿ ತಪ್ಪದೆ ಈ ಪೋಲೀಸು ಠಾಣೆಯನ್ನು ಮಂಜೂರ್ಮಾಡಿ ಕೊಡಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಗೃಹ ಸಚಿವರ ಪರವಾಗಿ).— ಸನ್ಮಾನ್ಯ ಅಧ್ಯಕ್ಷರೇ ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಹಂದನಕೆರೆ ಗ್ರಾಮಕ್ಕೆ ಹೊಸ ಪೋಲೀಸ್ ಠಾಣೆಗೆ ಈ ಕೆಳಕಂಡ ಸಿಬ್ಬಂದಿವರ್ಗದವರು ಬೇಕಾಗುತ್ತದೆ. ಪೋಲೀಸ್ ಸಬ್ ಇನ್‌ಸ್ಪೆಕ್ಟರು ಇಬ್ಬರು, ಸಹಾಯಕ ಸಬ್ ಇನ್‌ಸ್ಪೆಕ್ಟರು ಒಬ್ಬರು, ಹೆಡ್ ಕಾನ್‌ಸ್ಟೇಬಲ್‌ಗಳು ೮, ಪೋಲೀಸ್ ಕಾನ್‌ಸ್ಟೇಬಲ್‌ಗಳು ೪೦. ತಗಲುವ ವಾರ್ಷಿಕ ವೆಚ್ಚ ೭, ೩೮, ೨೬೪ ರೂಪಾಯಿಗಳು. ಪಂತರ್ತ ಅನಾವರ್ತಕ ವೆಚ್ಚ ೬೫,೫೦೦ರೂಪಾಯಿಗಳು. ಈ ಎಲ್ಲಾ ವೆಚ್ಚವನ್ನೂ ರಾಜ್ಯ ಸರ್ಕಾರವೇ ಭರಿಸಬೇಕಾಗಿರುವುದರಿಂದ, ಆರ್ಥಿಕ ಪರಿಸ್ಥಿತಿಯನ್ನು ಕೆಮನದಲ್ಲಿಟ್ಟುಕೊಂಡು, ಸೂಕ್ತ ಸಮಯದಲ್ಲಿ ಈ ಠಾಣೆಯ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

## ೧೦) ಗುಲ್ಬರ್ಗ ನಗರದಲ್ಲಿ ನೀರಿನ ತೊಂದರೆಯಾಗಿರುವುದು.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ನಗರದಲ್ಲಿ ಕುಡಿಯುವ ನೀರಿಗೆ ಸರಿಯಾದ ವ್ಯವಸ್ಥೆ ಇಲ್ಲದೆ ತೀರಾ ತೊಂದರೆಯಾಗಿದೆ ದಿನಬಿಟ್ಟು ದಿನ ಒಂದು ಗಂಟೆ ಕಾಲ ಮಾತ್ರ ನೀರನ್ನು ಬಿಡಲಾಗುತ್ತಿದೆ. ಕೆಲವು ಪ್ರದೇಶಗಳಲ್ಲಿ ಇದೂ ಕೂಡ ಇಲ್ಲ. ಹಾಕಿದ ಬೋರ್‌ವೆಲ್ಲುಗಳಲ್ಲಿ ನೀರಿಲ್ಲ. ಪರಿಸ್ಥಿತಿ ತೀರಾ ಭೀಕರವಾಗಿದೆ ಇದರ ಬಗ್ಗೆ ಅಲ್ಲಿನ ನಾಗರೀಕರೂ ಭಾರತ ಕಮ್ಯುನಿಸ್ಟ್ ಪಕ್ಷದ ಗುಲ್ಬರ್ಗಾ ಜಿಲ್ಲಾ ಮಂಡಲಿಯು, ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಿದ್ದಾರೆ. ಇದಾವುದಕ್ಕೂ ಸರ್ಕಾರದ ಪ್ರತಿಕ್ರಿಯೆ ಇಲ್ಲ. ಮಾತ್ರವಲ್ಲ, ಹುಣ್ಣಿನ ಮೇಲೆ ಬರೆ ಎಳೆಯುವಂತೆ, ನೀರಿನ ದರವನ್ನು ತಿಂಗಳಿಗೆ ೫ ರೂಪಾಯಿ ಇದ್ದಾದು, ರೂಪಾಯಿ ೨೫ಕ್ಕೆ ಹೆಚ್ಚಿಸಲಾಗಿದೆ. ಹೋಟೆಲಿನವರು ೬೫೦ ರೂಪಾಯಿಗಳನ್ನು ಕೊಡುತ್ತಿದ್ದರು. ಇದನ್ನು ರೂ. ೯೯೦ ರಿಂದ ರೂ. ೧೧೫೦ಕ್ಕೆ ಏರಿಸಿದ್ದಾರೆ. ನೀರೇ ಕೊಡದಿರಬೇಕಾದರೆ, ನೀರಿನ ದರವನ್ನಾದರೂ ಹೆಚ್ಚಿಸಲು ಕಾರಣವೇನು ?